ಶ್ರೀ ಜೀವರಾಜ ಆಳ್ವ (ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ನಾಟಕ ಅಕಾಡೆಮಿಯು ನೀಡಿರುವ ಕೆಲವು ಮಂಜೂರಿ ಸಲಹೆಗಳು ಈ ಕೆಳಕಂಡಂತಿವೆ.

i) ಯಕ್ಷಗಾನ ಬಯಲಾಟಗಳ ಜೊತೆಗೆ ನಾಟಕ (ಡ್ರಾಮಾ) ಅಥವಾ ಅಕಾಡೆಮಿಗಳಿಂದ ಅಥವಾ ಸರ್ಕಾರಿ ಇಲಾಖೆಗಳಿಂದ ಸಾದರಪಡಿಸಲಾಗುವ ಯಾವುದೇ ಕಾರ್ಯಕ್ರಮಗಳಿಗೂ ಪರವಾನಗಿ ಅಗತ್ಯ ವಿಲ್ಲವೆಂದು ಸರ್ಕಾರ ಆದೇಶ ಹೊರಡಿಸಬೇಕು.

ii) ಪರವಾನಗಿ ಕೊಡುವ ಅಧಿಕಾರಿಯು ಅರ್ಜಿದಾರರು ಅರ್ಜಿ ಸಲ್ಲಿಸಿದ ೫ ದಿನಗಳೊಳಗೆ ಸಂಬಂಧಪಟ್ಟ ಅಧಿಕಾರಿಗಳಿಂದ ತನಿಖಾ ವರದಿ ಅಥವಾ ಸರ್ಟಿಫಿಕೇಟುಗಳನ್ನು ತರಿಸಬೇಕು. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದ ೫ ದಿನಗಳೊಳಗೆ ವರದಿ ಬಾರದಿದ್ದಲ್ಲಿ ಪರವಾನಗಿ ಕೊಡಲು ಅವರ ಅಭ್ಯಂತರ ಇಲ್ಲವೆಂದು ಪರಿಗಣಿಸಿ ಪರವಾನಗಿ ಅಧಿಕಾರಿಗಳು ಮುಂದಿನ ಕ್ರಮ ತೆಗೆದುಕೊಳ್ಳಬೇಕು.

iii) ನಾಟಕ ಮಂದಿರಗಳ ಲೈಸೆನ್ಸಿಂಗ್ ಮತ್ತು ನಾಟಕಗಳ ಪೂರ್ವ ಸೆನ್ಸಾರ್‌ಶಿಪ್ ಇವುಗಳ ನಡುವೆ ಪರಸ್ಪರ ಸಂಬಂಧವನ್ನು ತೆಗೆದುಹಾಕಬೇಕು.

iv) ಕರ್ನಾಟಕ ಪೋಲೀಸ್ ಕಾಯಿದೆ ೧೯೬೫ರಲ್ಲಿ ೩೧(ಎಕ್ಸ್) ಕಲಮಿನಲ್ಲಿ ನಾಟಕಗಳ ಪೂರ್ವ ಸೆನ್ಸಾರ್‌ಶಿಪ್ ಬಗ್ಗೆ ಇರುವ ನಮೂದಾತಿಯನ್ನು ರದ್ದು ಪಡಿಸಬೇಕು.

ಆ) ನಾಟಕ ಕಂಪನಿಯವರಿಗೆ ಪರವಾನಗಿ ಕೊಡುವಾಗ ಅನುಸರಿಸಬೇಕಾದ ಕಾರ್ಯ ವಿಧಾನವನ್ನು ಸರಳಗೊಳಿಸಿ ಸರ್ಕಾರದವರು ಹೊಸದಾಗಿ ನಿಯಮಾವಳಿಯನ್ನು ಪರಿಷ್ಕರಿಸಲು, ದಿನಾಂಕ ೨೦, ೨೧–೨–೧೯೮೫ ರಂದು ಕರಡು ಆದೇಶದ ಸಂಖ್ಯೆ ಹೆಚ್‌ಡಿ ೧ ಸಿಎನ್‌ಪಿ ೮೫ನ್ನು ಹೊರಡಿಸಿ ಕರ್ನಾಟಕ ಗೆಜೆಟ್ಟಿನಲ್ಲಿ ಪ್ರಕಟಿಸಲಾಗಿದೆ. ಮತ್ತು ಇದರ ಬಗ್ಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರೆಯಲಾಗಿದೆ. ಈ ಪ್ರಕಾರ ಕರ್ನಾಟಕ ಅಕಾಡೆಮಿಯವರು ಅವರ ಸಲಹೆಗಳನ್ನು ಕಳುಹಿಸಿದ್ದಾರೆ. ಸದರಿ ಆದೇಶವನ್ನು ಅಂತಿಮ ಗೊಳಿಸಂವಾಗ ಪೋಲೀಸ್ ಕಾಯಿದೆಗೆ ತಿದ್ದುಪಡಿ ಮಾಡಲು ನಾಟಕ ಅಕಾಡೆಮಿಯವರು ನೀಡಿರುವ ಸಲಹೆಯನ್ನು ಪರಿಶೀಲಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಎಲ್ಲಾ ಜಿಲ್ಲಾ ದಂಡಾಧಿಕಾರಿಗಳ ಅಭಿಪ್ರಾಯ ಬಂದ ನಂತರ ಈ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದು.

ಭಾರತೀಯ ವೈದ್ಯ ಪದ್ಧತಿಗಳ ಬಗ್ಗೆ

೪೬. **ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್** (ಅಥಣಿ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಭಾರತೀಯ ವೈದ್ಯ ಪದ್ಧತಿಗಳ ಬಗ್ಗೆ ಡಾ. ಶ್ರೀ ಜಿ. ಎಸ್. ಮೇಲುಕೋಟೆಯವರಂ ಅಭಿವೃದ್ಧಿಗಾಗಿ ಮಾಡಿರುವ ಸಲಹೆಗಳೆಷ್ಟು ?

ಆ) ಅದರಲ್ಲಿ ಸರ್ಕಾರವು ಎಷ್ಟು ಸಲಹೆಗಳನ್ನು ಕಾರ್ಯಗತಗೊಳಿಸಿದೆ ?

ಇ) ಇನ್ನುಳಿದ ಸಲಹೆಗಳನ್ನು ಕಾರ್ಯಗತಗೊಳಿಸಲು ತೆಗೆದುಕೊಳ್ಳುವ ಕಾಲಾವಧಿ ಎಷ್ಟು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಹೌದು.

ಆ) ೨೭ ಪೂರ್ತಿಯಾಗಿ ಕಾರ್ಯಗತಗೊಳಿಸಲಾಗಿದೆ.
೨೨ ಭಾಗಶಃ ಕಾರ್ಯಗತಗೊಳಿಸಲಾಗಿದೆ.

ಇ) ಹಣಕಾಸಿನ ಲಭ್ಯತೆಯನ್ನು ಆಧರಿಸಿ ಅದಷ್ಟು ಬೇಗ ಕಾರ್ಯಗತಗೊಳಿಸಲಾಗುವುದು.